# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಶ್ರೀ ವಿ.ಎನ್.ವೀರಭದ್ರುಸ್ವಾಮಿ, ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ, ಚಿಕ್ಕಬಳ್ಳಾಪುರ ಈ ಹಿಂದಿನ ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ, ಬಳ್ಳಾರಿ, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ಇವರ ವಿರುದ್ಧದ ಆರೋಪಗಳ ಸಂಬಂಧ ಇಲಾಖಾ ವಿಚಾರಣೆ ನಡೆಸುವ ಬಗ್ಗೆ – ಆದೇಶ.

ಓದಲಾಗಿದೆ:
1. ಕೇಂದ್ರೀಯ ತನಿಖಾ ದಳ, ಬೆಂಗಳೂರು ರವರ ಪತ್ರ ಸಂಖ್ಯೆ:C2/RC.01/2014/CBI/ACB/BLR/2015/2926, ದಿನಾಂಕ: 08.06.2015.
2. ಸರ್ಕಾರದ ಅಭಿಯೋಜನಾ ಮಂಜೂರಾತಿ ಅದೇಶ ಸಂಖ್ಯೆ; ವಾಕೈ 147 ಕೈಸೇವಿ 2015, ದಿನಾಂಕ: 11.08.2015.
3. ಸರ್ಕಾರದ ಆದೇಶಗಳ ಸಂಖ್ಯೆ: ವಾಕೈ 231 ಕೈಸೇವಿ 2015, ದಿನಾಂಕ:19.04.2017, 06.06.2017 ಮತ್ತು 29.10.2018.
4. ಕೇಂದ್ರೀಯ ತನಿಖಾ ದಳ, ಬೆಂಗಳೂರು ರವರ ಪತ್ರ ಸಂಖ್ಯೆ:C2/RC 02(A)/2014/CBI/ACB/BLR/4516, ದಿನಾಂಕ: 31.08.2015.
5. ಸರ್ಕಾರದ ಅಭಿಯೋಜನಾ ಮಂಜೂರಾತಿ ಅದೇಶ ಸಂಖ್ಯೆ; ವಾಕೈ 199 ಕೈಸೇವಿ 2015, ದಿನಾಂಕ: 23.029.2015.
6. ಆರೋಪಿತ ಅಧಿಕಾರಿಯವರಿಗೆ ನಿಯಮ 11 ರಡಿ ಹೊರಡಿಸಲಾದ ಕಾರಣ ಕೇಳುವ ನೋಟಿಸ್ ಸಂಖ್ಯೆ: ವಾಕೈ 04 ಕೈಸೇವಿ 2024, ದಿನಾಂಕ: 22.11.2024.
7. ಆರೋಪಿತ ಅಧಿಕಾರಿಯವರ ಪತ್ರದ ಸಂಖ್ಯೆ: ಜಿಕೈಕೇ/ಚಿಬಪು/ನೋಟಿಸ್/2024-25, ದಿನಾಂಕ:16.12.2024.
8. ಸರ್ಕಾರದ ಪತ್ರದ ಸಂಖ್ಯೆ: ವಾಕೈ 04 ಕೈಸೇವಿ 2024, ದಿನಾಂಕ: 23.12.2024.

* * * * *

**ಪ್ರಸ್ತಾವನೆ:**

ಶ್ರೀ ವಿ.ಎನ್. ವೀರಭದ್ರುಸ್ವಾಮಿ, ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ ಚಿಕ್ಕಬಳ್ಳಾಪುರ ಇವರು ಈ ಹಿಂದೆ ಜಿಲ್ಲಾ ಕೈಗಾರಿಕಾ ಕೇಂದ್ರ, ಬಳ್ಳಾರಿ ಇಲ್ಲಿ ಜಂಟಿ ನಿರ್ದೇಶಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ Credit Guarantee Fund Trust for Micro and Small Enterprises (C.G.T.M.S.E) ಯೋಜನೆಯಡಿ ಅಲಹಾಬಾದ್ ಬ್ಯಾಂಕ್ ನಿಂದ ಸಾಲ ಪಡೆಯಲು ವಾಸ್ತವವಾಗಿ ಸ್ಥಾಪಿಸಲ್ಪಡದಿರುವ ಕೈಗಾರಿಕಾ ಘಟಕಗಳು ಅಸ್ತಿತ್ವದಲ್ಲಿದ್ದು ಕಾರ್ಯ ನಿರ್ವಹಿಸುತ್ತಿದೆ ಎಂದು ಪ್ರಮಾಣ ಪತ್ರ ನೀಡಿ ಕರ್ತವ್ಯ ಲೋಪವೆಸಗಿ, ಕೆಲವೊಂದು ಉದ್ದಿಮೆಗಳಿಗೆ ಮಾರ್ಜಿನ್ ಹಣವನ್ನು ಪಡೆಯಲು ಕೈಗಾರಿಕಾಭಿವೃದ್ಧಿ ಆಯುಕ್ತರಿಗೆ ಶಿಫಾರಸ್ಸು ಮಾಡಿ ಉದ್ದಿಮೆದಾರರಿಂದ ಅನಧಿಕೃತವಾಗಿ ಹಣ ಪಡೆದಿರುವುದು ಮೇಲ್ನೋಟಕ್ಕೆ ಕಂಡು ಬಂದಿರುವುದರಿಂದ ಹಾಗೂ ಇವರ ಕರ್ತವ್ಯ ಲೋಪದಿಂದ ಬ್ಯಾಂಕಿಗೆ ಆರ್ಥಿಕ ನಷ್ಟ ಉಂಟಾಗಿರುವುದು ಕಂಡು ಬಂದಿರುವುದರಿಂದ ಇವರ ವಿರುದ್ಧ ಈ ಕೆಳಕಂಡ ಎರಡು ಪ್ರಕರಣಗಳಲ್ಲಿ ಮೇಲೆ ಓದಲಾದ ಕ್ರಮ ಸಂಖ್ಯೆ (1) ಮತ್ತು (4) ರನ್ವಯ ಸಿಬಿಐ ವರದಿಯನ್ನು ನೀಡಿ ಅಭಿಯೋಜನಾ ಮಂಜೂರಾತಿ ಕೋರಿರುತ್ತದೆ ಹಾಗೂ ಇಲಾಖಾ ವಿಚಾರಣೆಗೆ ಶಿಫಾರಸ್ಸು ಮಾಡಿರುತ್ತದೆ.

1. RC.01(A)/2014-Blr against Shri. K.Saradhi, the then Sr. Manager, Allahabad Bank, Bellary Branch and others. (Sri V.N. Veerabhadraswamy is A-6 in this case)
2. 2. RC.02(A)/2014-CBI/ACB/BLR against Shri. N.V.Nageshwara Rao (A-1), Senior Manager, Allahabad Bank, Dharawad Branch (presently under suspension) and others (Sri V.N. Veerabhadraswamy is A-5 in this case)

RC.01(A)/2014-Blr against Shri. K.Saradhi, the then Sr. Manager, Allahabad Bank, Bellary Branch and others. (Sri V.N. Veerabhadraswamy is A-6 in this case) ಪ್ರಕರಣದಲ್ಲಿ ಮೇಲೆ ಓದಲಾದ ಕ್ರಮ ಸಂಖ್ಯೆ (2)ರಲ್ಲಿ ಅಭಿಯೋಜನಾ ಮಂಜೂರಾತಿಯನ್ನು ನೀಡಲಾಗಿದೆ ಹಾಗೂ ಮೇಲೆ ಓದಲಾದ ಕ್ರಮ ಸಂಖ್ಯೆ (3)ರಲ್ಲಿ ಇಲಾಖಾ ವಿಚಾರಣೆಗೆ ವಿಚಾರಣಾಧಿಕಾರಿ ಮತ್ತು ಮಂಡನಾಧಿಕಾರಿಗಳ ನೇಮಕ, ಬದಲಾವಣೆ ಮಾಡಿ ಇಲಾಖಾ ವಿಚಾರಣೆ ಹೂಡಲಾಗಿದೆ. ಈ ಪ್ರಕರಣದಲ್ಲಿ ಕ್ರಿಮಿನಲ್ ಮೊಕದ್ದಮೆಯು ಪ್ರಗತಿಯಲ್ಲಿರುತ್ತದೆ ಹಾಗೂ ಇಲಾಖಾ ಬಿಚಾರಣೆಯು ಪೂರ್ಣಗೊಂಡಿರುತ್ತದೆ.

RC.02(A)/2014-CBI/ACB/BLR against Shri. N.V.Nageshwara Rao (A-1), Senior Manager, Allahabad Bank, Dharawad Branch (presently under suspension) and others (Sri V.N. Veerabhadraswamy is A-5 in this case) ಪ್ರಕರಣದಲ್ಲಿ ಮೇಲೆ ಓದಲಾದ ಕ್ರಮ ಸಂಖ್ಯೆ (5)ರಲ್ಲಿ ಅಭಿಯೋಜನಾ ಮಂಜೂರಾತಿಯನ್ನು ನೀಡಲಾಗಿದ್ದು, ಕ್ರಿಮಿನಲ್ ಪ್ರಕರಣವು ಬಾಕಿ ಇರುತ್ತದೆ. ಆದರೆ ಇಲಾಖಾ ವಿಚಾರಣೆಯನ್ನು ನಡೆಸಲು ಕ್ರಮವಹಿಸಿರುವುದಿಲ್ಲ. ಆದುದರಿಂದ, ಆಪಾದಿತ ಅಧಿಕಾರಿಯವರಾದ ಶ್ರೀ ವಿ.ಎನ್. ವೀರಭದ್ರಸ್ವಾಮಿ ಇವರು Credit Guarantee Fund Trust for Micro and Small Enterprises (C.G.T.M.S.E) ಯೋಜನೆಯಡಿಯಲ್ಲಿ 46 ಸಾಲದ ಅರ್ಜಿಗಳನ್ನು ಅಲಹಾಬಾದ್ ಬ್ಯಾಂಕ್, ಧಾರವಾಡ ಶಾಖೆಗೆ ಮಂಜೂರಾತಿಗಾಗಿ ಕಳುಹಿಸುವ ಸಂದರ್ಭದಲ್ಲಿ ಹೊಸಪೇಟೆಯಲ್ಲಿನ ವಿವಿಧ ಸೂಕ್ಷ್ಮ ಮತ್ತು ಸಣ್ಣ ಉದ್ದಿಮೆಗಳನ್ನು ಭೇಟಿ/ತಪಾಸಣೆ ಮಾಡಿ, ಘಟಕಗಳು ಅಸ್ತಿತ್ವದಲ್ಲಿದ್ದು ಕಾರ್ಯ ನಿರ್ವಹಿಸುತ್ತಿರುತ್ತವೆ ಎಂದು ಸುಳ್ಳು ವರದಿಯನ್ನು ನೀಡಿರುತ್ತಾರೆ. ಆದರೆ ಸಿಬಿಐ ತನಿಖೆ ವೇಳೆಯಲ್ಲಿ ವಾಸ್ತವಿಕವಾಗಿ ಈ ಘಟಕಗಳು ಅಸ್ತಿತ್ವದಲ್ಲಿರುವುದಿಲ್ಲವೆಂದು ಸಾಬೀತಾಗಿರುತ್ತದೆ ಮುಂದುವರೆದು ತನಿಖೆಯಲ್ಲಿ ಅರ್ಜಿಯನ್ನು ಶಿಫಾರಸ್ಸು ಮಾಡಲು ಶ್ರೀ ಸಂತೋಷ್, ಶ್ರೀ ಮಾರಪ್ಪ, ಶ್ರೀ ಈರೇಶಿ ಮತ್ತು ಶ್ರೀ ಮಂಜುನಾಥ್ ರವರಿಂದ ಪ್ರತಿ ಅರ್ಜಿಗೆ ರೂ.7,500/- ರೂಪಾಯಿಗಳನ್ನು ಪಡೆದಿರುತ್ತಾರೆ. 46 ಅರ್ಜಿಗಳಲ್ಲಿ 21 ಅರ್ಜಿಗಳನ್ನು ಜಿಲ್ಲಾ ಕೈಗಾರಿಕಾ ಕೇಂದ್ರದಿಂದ ಶಿಫಾರಸ್ಸು ಮಾಡಲಾಗಿದೆ. ಸದರಿ ಯೋಜನೆಯಡಿ ಘಟಕಗಳು ಅಸ್ತಿತ್ವದಲ್ಲಿ ಇದೆ/ಇಲ್ಲವೆಂದು ಖಚಿತ ಪಡಿಸಿಕೊಳ್ಳದೇ ಜಿಲ್ಲಾ ಕೈಗಾರಿಕಾ ಕೇಂದ್ರ ಕಚೇರಿಯಿಂದ ಸಾಲ ಮಂಜೂರಾತಿಗಾಗಿ ಅನುಮೋದನೆಯನ್ನು ನೀಡಲಾಗಿದೆ.

ಜಿಲ್ಲಾ ಕೈಗಾರಿಕಾ ಕೇಂದ್ರ, ಬಳ್ಳಾರಿ ಕಛೇರಿಯಲ್ಲಿ ಆನಲೈನ್ ಮುಖಾಂತರ ಅರ್ಜಿಯನ್ನು ಶ್ರೀ ಕೆ.ಲಕ್ಷ್ಮಣ, ಗಣತಿದಾರರು, ಗಣಕ ಯಂತ್ರದಲ್ಲಿ ಮಾಹಿತಿಯನ್ನು ದಾಖಲೆ ಮಾಡಿದ ನಂತರ ಸ್ವಯಂ ಚಾಲಿತ ಸ್ವೀಕೃತಿ ಸಂಖ್ಯೆ ಬರುತ್ತದೆ. ಅದರಲ್ಲಿ ಭಾಗ-1 ಮತ್ತು ಭಾಗ-2 ಅನ್ನು ನೀಡುವಾಗ ಎಂ.ಎಸ್.ಎಂ.ಇ.ಡಿ ಕಾಯ್ದೆ ಅನ್ವಯ ಪರಿಶೀಲಿಸಿ ನೀಡುವುದು ಆಪಾದಿತ ಅಧಿಕಾರಿಯವರ ಕರ್ತವ್ಯವಾಗಿರುತ್ತದೆ. ಆದರೆ ಭಾಗ-1 ಮತ್ತು ಭಾಗ-2 ಗಳನ್ನು ಪರಿಶೀಲಿಸದೇ ಮಂಜೂರಾತಿ ನೀಡಿ ಕರ್ತವ್ಯಲೋಪ ಎಸಗಿರುತ್ತಾರೆ.

ಆದ್ದರಿಂದ ಅವರ ಪ್ರಾಮಾಣಿಕತೆಯಲ್ಲಿ ಕೊರತೆ ಇರುವುದು ಸ್ಪಷ್ಟವಾಗಿ ಕಂಡು ಬಂದಿದ್ದು ಮತ್ತು ಸರ್ಕಾರಿ ನೌಕರರಿಗೆ ಸಲ್ಲದ ರೀತಿಯಲ್ಲಿ ವರ್ತಿಸಿ, ದುರ್ನಡತೆ ಎಸಗಿರುವುದು ಹಾಗೂ ಇವರ ಕರ್ತವ್ಯ ನಿರ್ಲಕ್ಷತೆಯಿಂದ ಬ್ಯಾಂಕಿಗೆ ಆರ್ಥಿಕ ನಷ್ಟ ಉಂಟು ಮಾಡಿರುವುದು ಮೇಲ್ನೋಟಕ್ಕೆ ಕಂಡು ಬಂದಿರುತ್ತದೆ. ಇವರು ಕರ್ನಾಟಕ ನಾಗರಿಕ ಸೇವಾ (ನಡತೆ) ನಿಯಮಗಳು 2021ರ ನಿಯಮ 3(1) (i) (iii) ಮತ್ತು (iv) ಗಳನ್ನು ಉಲ್ಲಂಘಿಸಿರುವುದರಿಂದ ಇವರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲು ಉದ್ದೇಶಿಸಿ, ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 11 ರಡಿ ಮೇಲೆ ಓದಲಾದ ಕ್ರಮ ಸಂಖ್ಯೆ (6) ರಲ್ಲಿ ಕಾರಣ ಕೇಳುವ ನೋಟಿಸಿನೊಂದಿಗೆ ಆರೋಪ ಪಟ್ಟಿ ಅನುಬಂಧ 1 ರಿಂದ 4 ಅನ್ನು ಆಪಾದಿತ ಅಧಿಕಾರಿಯವರಿಗೆ ಹೊರಡಿಸಲಾಗಿದೆ.

ಆಪಾದಿತ ಅಧಿಕಾರಿಯವರಾದ ಶ್ರೀ ವಿ.ಎನ್.ವೀರಭದ್ರಸ್ವಾಮಿ, ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ, ಚಿಕ್ಕಬಳ್ಳಾಪುರ ಇವರು ಮೇಲೆ ಓದಲಾದ ಕ್ರಮ ಸಂಖ್ಯೆ (7)ರ ಪತ್ರದಲ್ಲಿ CBI ತನಿಖಾ ವರದಿ ಸಂಖ್ಯೆ: RC 02(A)/2014-CBI/BLR ಪ್ರಕರಣದ ಬಗ್ಗೆ ಲಿಖಿತ ರೂಪದಲ್ಲಿ ಹೇಳಿಕೆಯನ್ನು ಸಲ್ಲಿಸುವಂತೆ ದಿನಾಂಕ:22.11.2024ರ ಕಾರಣ ಕೇಳುವ ನೋಟೀಸ್‌ನಲ್ಲಿ ತಿಳಿಸಲಾಗಿದ್ದು, ಸದರಿ ಪ್ರಕರಣ ನಡೆದು 12 ವರ್ಷಗಳಾಗಿರುತ್ತದೆ ಮತ್ತು ಸದರಿ ಪ್ರಕರಣ ಸಂಖ್ಯೆ: 501/2012 ಸಿಬಿಐ ಕೋರ್ಟ್ ವಿಚಾರಣೆಯಲ್ಲಿ ಅಂತಿಮ ಹಂತಕ್ಕೆ ಬಂದಿರುತ್ತದೆ. ಆದುದರಿಂದ ಈ ಪ್ರಕರಣದ ಸಂಬಂಧ ಒಂದು ತಿಂಗಳ ಸಮಯ ಕಾಲಾವಕಾಶ ನೀಡುವಂತೆ ಕೋರಿರುತ್ತಾರೆ.

ಅದರಂತೆ, ಮೇಲೆ ಓದಲಾದ ಕ್ರಮ ಸಂಖ್ಯೆ (8)ರ ಪತ್ರದಲ್ಲಿ ಶ್ರೀ ವಿ.ಎನ್.ವೀರಭದ್ರಸ್ವಾಮಿ, ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ, ಚಿಕ್ಕಬಳ್ಳಾಪುರ ಇವರಿಗೆ ದಿನಾಂಕ:22.11.2024ರ ಕಾರಣ ಕೇಳುವ ನೋಟೀಸ್‌ಗೆ ಲಿಖಿತ ಹೇಳಿಕೆಯನ್ನು ಸಲ್ಲಿಸಲು ಕೊನೆಯ ಬಾರಿಗೆ ಎಂದು ತಿಳಿಸಿ ಒಂದು ತಿಂಗಳ ಕಾಲಾವಕಾಶವನ್ನು ನೀಡಲಾಗಿದೆ. ಸದರಿ ಪತ್ರವು ನೋಂದಾಯಿತ ಅಂಚೆ ಸ್ವೀಕೃತಿಯನ್ವಯ ದಿನಾಂಕ:27.12.2024 ರಂದು ಅಧಿಕಾರಿಯವರಿಗೆ ಸ್ವೀಕೃತವಾಗಿರುತ್ತದೆ.

ಆದಾಗ್ಯೂ, ಸದರಿ ಅಧಿಕಾರಿಯವರು ಸರ್ಕಾರದ ಕಾರಣ ಕೇಳುವ ನೋಟೀಸ್‌ಗೆ ಇದುವರೆವಿಗೂ ರಕ್ಷಣಾ ಹೇಳಿಕೆಯನ್ನು ಸಲ್ಲಿಸಿರುವುದಿಲ್ಲ. ಇದನ್ನು ಸರ್ಕಾರದಲ್ಲಿ ಗಂಭೀರವಾಗಿ ಪರಿಗಣಿಸಲಾಗಿದೆ.

ಆದುದರಿಂದ, ಶ್ರೀ ವಿ.ಎನ್. ವೀರಭದ್ರಸ್ವಾಮಿ, ಜಂಟಿ ನಿರ್ದೇಶಕರು ಇವರು ಒಬ್ಬ ಜವಾಬ್ದಾರಿಯುತ ಸರ್ಕಾರಿ ಅಧಿಕಾರಿಯಾಗಿದ್ದು, ಕರ್ನಾಟಕ ಸಿವಿಲ್ ಸೇವಾ (ನಡತೆ) ನಿಯಮಗಳು, 2021 ರ ನಿಯಮ 3(1) (i) (ii) (iii) ಮತ್ತು (iv) ನ್ನು ಉಲ್ಲಂಘಿಸಿರುವುದು ಮೇಲ್ನೋಟಕ್ಕೆ ಕಂಡು ಬಂದಿರುವ ಹಿನ್ನೆಲೆಯಲ್ಲಿ, ಸದರಿಯವರ ವಿರುದ್ಧದ ಆರೋಪಗಳ ಸಂಬಂಧ ಸತ್ಯಾಸತ್ಯತೆಯನ್ನು ಅರಿಯುವ ಸಲುವಾಗಿ ನಿಯಮಾನುಸಾರ ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 11 ರಡಿ ಇಲಾಖಾ ವಿಚಾರಣೆ ನಡೆಸಲು ಸರ್ಕಾರವು ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

<u>ಸರ್ಕಾರದ ಆದೇಶ ಸಂಖ್ಯೆ: ವಾಕೈ 04 ಕೈಸೇವಿ 2024, ಬೆಂಗಳೂರು ದಿನಾಂಕ: 07.04.2025.</u>

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಶ್ರೀ ವಿ.ಎನ್.ವೀರಭದ್ರಸ್ವಾಮಿ, ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ, ಚಿಕ್ಕಬಳ್ಳಾಪುರ ಇವರು ಈ ಹಿಂದೆ ಜಿಲ್ಲಾ ಕೈಗಾರಿಕಾ ಕೇಂದ್ರ, ಬಳ್ಳಾರಿ ಇಲ್ಲಿ ಜಂಟಿ ನಿರ್ದೇಶಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ Credit Guarantee Fund Trust for Micro and Small Enterprises (C.G.T.M.S.E) ಯೋಜನೆಯಡಿ

--4

ಅಲಹಾಬಾದ್ ಬ್ಯಾಂಕ್ ನಿಂದ ಸಾಲ ಪಡೆಯಲು ವಾಸ್ತವವಾಗಿ ಸ್ಥಾಪಿಸಲ್ಪಡದಿರುವ ಕೈಗಾರಿಕಾ ಘಟಕಗಳು ಅಸ್ತಿತ್ವದಲ್ಲಿದ್ದು ಕಾರ್ಯ ನಿರ್ವಹಿಸುತ್ತಿದೆ ಎಂದು ಪ್ರಮಾಣ ಪತ್ರ ನೀಡಿ ಕರ್ತವ್ಯ ಲೋಪವೆಸಗಿ, ಕೆಲವೊಂದು ಉದ್ದಿಮೆಗಳಿಗೆ ಮಾರ್ಜಿನ್ ಹಣವನ್ನು ಪಡೆಯಲು ಕೈಗಾರಿಕಾಭಿವೃದ್ಧಿ ಆಯುಕ್ತರಿಗೆ ಶಿಫಾರಸ್ಸು ಮಾಡಿ ಉದ್ದಿಮೆದಾರರಿಂದ ಅನಧಿಕೃತವಾಗಿ ಹಣ ಪಡೆದಿರುವುದು ಮೇಲ್ನೋಟಕ್ಕೆ ಕಂಡು ಬಂದಿರುವುದರಿಂದ ಹಾಗೂ ಇವರ ಕರ್ತವ್ಯ ಲೋಪದಿಂದ ಆರ್ಥಿಕ ನಷ್ಟ ಉಂಟಾಗಿರುವುದರಿಂದ (ಸಿ ಬಿ ಐ ರವರ ತನಿಖಾ ವರದಿ ಸಂಖ್ಯೆ:RC.02(A)/2014-CBI/ACB/BLR (against Shri. N.V.Nageshwara Rao (A-1), Senior Manager, Allahabad Bank, Dharawad Branch (presently under suspension) and others, Sri V.N. Veerabhadraswamy is A-5 in this case) ಕರ್ನಾಟಕ ಸಿವಿಲ್ ಸೇವಾ (ನಡತೆ) ನಿಯಮಗಳು, 2021 ರ ನಿಯಮ 3(1) (i) (ii) (iii) ಮತ್ತು (iv) ಗಳನ್ನು ಉಲ್ಲಂಘಿಸಿರುವ ಆರೋಪಗಳ ಬಗ್ಗೆ ಸತ್ಯಾ ಸತ್ಯತೆಯನ್ನು ತಿಳಿಯಲು ಕೆಸಿಎಸ್ (ಸಿಸಿಎ) ನಿಯಮಾವಳಿಗಳು-1957 ನಿಯಮ 11 ರಡಿಯಲ್ಲಿ ಇಲಾಖಾ ವಿಚಾರಣೆಯನ್ನು ನಡೆಸಲು ಉದ್ದೇಶಿಸಿ, ಶ್ರೀ ಎಸ್.ವೈ. ಕುಂಬಾರ, ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು (ನಿವೃತ್ತ), ನಂ: 104/1, "ಶಿವಗಂಗ", 1ನೇ ಡಿ ಮುಖ್ಯ ರಸ್ತೆ, ಜಕ್ಕಸಂದ್ರ, ಕೋರಮಂಗಲ 1ನೇ ಬ್ಲಾಕ್, ಸರ್ಜಾಪುರ ಮುಖ್ಯ ರಸ್ತೆ, ಜಕ್ಕಸಂದ್ರ ಬಸ್ ನಿಲ್ದಾಣದ ಹತ್ತಿರ, ಬೆಂಗಳೂರು-560034 ಇವರನ್ನು ವಿಚಾರಣಾಧಿಕಾರಿಯನ್ನಾಗಿ ಹಾಗೂ ಶಿಸ್ತು ಪ್ರಾಧಿಕಾರದ ಪರವಾಗಿ ಪ್ರಕರಣವನ್ನು ವಿಚಾರಣಾಧಿಕಾರಿಗಳ ಮುಂದೆ ಮಂಡಿಸಲು ಅಪರ ನಿರ್ದೇಶಕರು (ಆಡಳಿತ), ಕೈಗಾರಿಕೆ ಮತ್ತು ವಾಣಿಜ್ಯ ನಿರ್ದೇಶನಾಲಯ, ಕೇಂದ್ರ ಕಛೇರಿ, ಬೆಂಗಳೂರು ಇವರನ್ನು ಮಂಡನಾಧಿಕಾರಿಯನ್ನಾಗಿ ನೇಮಿಸಿ ಆದೇಶಿಸಿದೆ. ವಿಚಾರಣಾಧಿಕಾರಿಗಳು ಪ್ರಕರಣದ ವಿಚಾರಣಾ ವರದಿಯನ್ನು 3 ತಿಂಗಳ ಅವಧಿಯೊಳಗೆ ಶಿಸ್ತು ಪ್ರಾಧಿಕಾರಕ್ಕೆ ಸಲ್ಲಿಸುವಂತೆ ಸೂಚಿಸಿದೆ.

ಆಯುಕ್ತರು, ಕೈಗಾರಿಕಾಭಿವೃದ್ಧಿ ಹಾಗೂ ನಿರ್ದೇಶಕರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ಇವರು ವಿಚಾರಣಾಧಿಕಾರಿಗಳಿಗೆ ವಿಚಾರಣೆಗೆ ಸ್ಥಳಾವಕಾಶ ಹಾಗೂ ಶೀಘ್ರಲಿಪಿಗಾರರ/ ಬೆರಳಚ್ಚುಗಾರರ ಸಹಾಯವನ್ನು ಮತ್ತು ಲೇಖನ ಸಾಮಗ್ರಿಗಳನ್ನು ಒದಗಿಸಲು ತಿಳಿಸಿದೆ.

ಸರ್ಕಾರಿ ಆದೇಶಗಳ ಸಂಖ್ಯೆ: ಸಿಆಸುಇ 6 ಸೇಇವಿ 2010, ದಿನಾಂಕ: 28-04-2011 ಮತ್ತು ಸಿಆಸುಇ 11 ಸೇಇವಿ 2019, ದಿನಾಂಕ:24.04.2019 ರನ್ವಯ ವಿಚಾರಣಾಧಿಕಾರಿ ಮತ್ತು ಮಂಡನಾಧಿಕಾರಿಗಳು ಸಂಭಾವನೆಯನ್ನು ಪಡೆಯಲು ಅರ್ಹರಾಗಿದ್ದು, ವಿಚಾರಣಾಧಿಕಾರಿಗಳು ವಿಚಾರಣಾ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದ ನಂತರ ಕೈಗಾರಿಕೆ ಮತ್ತು ವಾಣಿಜ್ಯ ನಿರ್ದೇಶನಾಲಯದಿಂದ ಇವರಿಗೆ ಸಂಭಾವನೆಯನ್ನು ಪಾವತಿ ಮಾಡತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಉಮಾದೇವಿ .ಕೆ)
ಸರ್ಕಾರದ ಅಧೀನ ಕಾರ್ಯದರ್ಶಿ,
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ
(ಸೇವೆಗಳು ಮತ್ತು ಸಮನ್ವಯ)

<u>ಇವರಿಗೆ:</u>

1. ಮಹಾಲೇಖಪಾಲರು, (ಎ ಮತ್ತು ಇ)/(ಲೆಕ್ಕಪತ್ರ) / (ಆಡಿಟ್ 1 & 2), ಕರ್ನಾಟಕ, ಬೆಂಗಳೂರು.
2. ಆಯುಕ್ತರು, ಕೈಗಾರಿಕಾಭಿವೃದ್ಧಿ ಹಾಗೂ ನಿರ್ದೇಶಕರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ನಂ.49. ಖನಿಜ ಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು.

ಃ



3. ಶ್ರೀ ಎಸ್.ವೈ. ಕುಂಬಾರ, ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು (ನಿವೃತ್ತ), ನಂ: 104/1, "ಶಿವಗಂಗ", 1ನೇ ಡಿ ಮುಖ್ಯ ರಸ್ತೆ, ಜಕ್ಕಸಂದ್ರ, ಕೋರಮಂಗಲ 1ನೇ ಬ್ಲಾಕ್, ಸರ್ಜಾಪುರ ಮುಖ್ಯ ರಸ್ತೆ, ಜಕ್ಕಸಂದ್ರ ಬಸ್ ನಿಲ್ದಾಣದ ಹತ್ತಿರ, ಬೆಂಗಳೂರು -560034.
4. ಅಪರ ನಿರ್ದೇಶಕರು (ಆಡಳಿತ) ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ನಂ.49. ಖನಿಜ ಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು.
5. ಶ್ರೀ ವಿ.ಎನ್.ವೀರಭದ್ರಸ್ವಾಮಿ, ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ, ಚಿಕ್ಕಬಳ್ಳಾಪುರ.
6. ಶಾಖಾ ರಕ್ಷಾ ಕಡತ: ಹೆಚ್ಚುವರಿ ಪ್ರತಿಗಳು.

<u>ಪ್ರತಿಗಳು:</u>

1. ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ ರವರ ಆಪ್ತ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ವಿಕಾಸಸೌಧ, ಬೆಂಗಳೂರು.
3. ಸರ್ಕಾರದ ಉಪ ಕಾರ್ಯದರ್ಶಿ ರವರ ಆಪ್ತ ಸಹಾಯಕರು, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ವಿಕಾಸಸೌಧ, ಬೆಂಗಳೂರು.